Electrification of 74 Nos. of Hamlets/Dalith Basthis/ Janatha Colonies has been proposed under a Rural Electrification Scheme.

b) The Cost of this Scheme is Rs. 1094.93 lakhs

c) This scheme could not be implemented due to non-furnishing of Guarantee rom the Finance Department, Govt. of Karnataka and also due to change of policies in rural electrification.

d) The scheme is now reconsidered with the revision of cost to Rs.1216.16 Lakhs. The Rural Electrification Corporation has conveyed its Administrative Approval on 14.2.2005. The work will be taken up after completion of formalities such as signing of Memorandum of Agreement etc., for financial assistance.

2061 (2609) ಶ್ರೀ ಕೆ.ಜಿ. ಬೋಪಯ್ಯ (ಮಡಿಕೇರಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಿಕೇರಿ ತಾಲ್ಲೂಕು ಭಾಗಮಂಡಲ ತಲಕಾವೇರಿಯಲ್ಲಿ ವಿದ್ಯುತ್ ಉತ್ಪಾದಿಸಲು ಗಾಳಿ ಯಂತ್ರವನ್ನು ಅಳವಡಿಸುವ ಯೋಜನೆಯನ್ನು ಕೆಲವು ವರ್ಷಗಳ ಹಿಂದು ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಯೋಜನೆಗೆ ಒಟ್ಟು ಎಷ್ಟು ಹಣ ಖರ್ಚಾಗಿದೆ ಇದಕ್ಕೆ ಬೇಕಾದ ಯಂತ್ರಗಳನ್ನು ಎಲ್ಲಿಂದ ಖರೀದಿಸಲಾಗಿದೆ ಮತ್ತು ಇದಕ್ಕಾಗಿ ಖರ್ಚು ಮಾಡಿದ ಮೊತ್ತವೆಷ್ಟು;

ಇ) ಈ ಯೊಜನೆ ಇನ್ನೂ ಅನುಷ್ಟಾನದಲ್ಲಿದೆಯೇ ಅಥವಾ ಸರ್ಕಾರ ಕೈ ಬಿಟ್ಟಿದೆಯೇ ಒಂದು ವೇಳೆ ಕೈ ಬಿಟ್ಟಿದ್ದರೆ ಕೈ ಬಿಡಲು ಸ್ಪಷ್ಟೀಕರಣವೇನು;

ಈ) ಈ ಯೋಜನೆಗಾಗಿ ಸರ್ಕಾರ ಇಲ್ಲಿವರೆಗೆ ಎಷ್ಟು ಖರ್ಚು ಮಾಡಿದೆ : ವಿವರವನ್ನು ಒದಗಿಸುವುದು ಒಂದು ವೇಳೆ ಪ್ರಗತಿಯಲ್ಲಿದ್ದರೆ ಅದರ ಬಗ್ಗೆ ವಿವರವಾದ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ಕೇಂದ್ರ ಸರ್ಕಾರ ಸ್ವಾಮ್ಯದ ಎನ್.ಎ.ಎಲ್. ಬೆಂಗಳೂರು ಮತ್ತು ಡಿ.ಎನ್.ಇ.ಎಸ್. ಸಂಸ್ಥೆಯು ತಯಾರು ಮಾಡಿರುವ ವರದಿಯ ಆಧಾರದ ಮೇಲೆ ಕೊಡಗು ಜಿಲ್ಲೆಯ ಭಾಗಮಂಡಲ ತಾಲ್ಲೂಕಿನ ತಲಕಾವೇರಿ ಎಂಬಲ್ಲಿ ಒಂದು ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲಾಗಿದೆ.

ಆ) ಕೇಂದ್ರ ಸರ್ಕಾರದ ವಂತಿಗೆ ರೂ. 60.50 ಲಕ್ಷ

ರಾಜ್ಯ ಅಧೀನ ಸಂಸ್ಥೆಗಳಿಂದ:

ಕೆ.ಎಸ್.ಐ.ಐ.ಡಿ.ಸಿ.	ರೂ. 0.50 ಲಕ್ಷ
ಕೆ.ಎಸ್.ಎಫ್.ಸಿ.	ರೂ. 7.34 ಲಕ್ಷ
ಕೆ.ಪಿ.ಸಿ.	ರೂ. 7.34 ಲಕ್ಷ
ಒಟ್ಟು	**ರೂ. 75.68 ಲಕ್ಷ**

ಇದಕ್ಕೆ ಬೇಕಾದ ಯಂತ್ರಗಳನ್ನು ಮೆಸರ್ಸ್ ಜಿ.ಕೆ. ಸಿಂಥೆಟಿಕ್ಸ್ ನ್ಯೂ ಡೆಲ್ಲಿ ಇವರಿಂದ ತರಿಸಿಕೊಳ್ಳಲಾಗಿದೆ. ಈ ಯಂತ್ರಗಳನ್ನು ಮೆಸರ್ಸ್ ವಿನಕಾಸ್ ಡೆನ್ಮಾರ್ಕ್ ಇವರು ತಯಾರಿಸುತ್ತಾರೆ. ಇದಕ್ಕೆ ರೂ. 75.48 ಲಕ್ಷ ಖರ್ಚಾಗಿರುತ್ತದೆ.

ಇ) ಸಲಕರಣಿಗಳ ಸ್ಥಾಪನಾ ಕಾರ್ಯ ಪೂರ್ತಿಗೊಂಡಿಲ್ಲ. ಎಂದು ರಾಜ್ಯ ಸಂಸ್ಥೆಗಳು ಮೆಸರ್ಸ್ ಜಿ.ಕೆ. ಸಿಂಥೆಟಿಕ್ಸ್ ಅವರ ಮೇಲೆ ಮಾನ್ಯ ಸಿಟಿ ಸಿವಿಲ್ ಜಡ್ಜ್ ಅವರಲ್ಲಿ ಪಿಟಿಷನ್ ಹಾಕಿ ರೂ. 111.14 ಲಕ್ಷವನ್ನು ಕೊಡಬೇಕೆಂದು ಕೋರಿದೆ. ಈ ವಿಚಾರಣೆಯನ್ನು ಮೆಸರ್ಸ್ ಜಿ.ಕೆ. ಸಿಂಥೆಟಿಕ್ಸ್‌ನವರು ಬಿ.ಐ.ಎಫ್.ಆರ್. ನಲ್ಲಿ ಇರುವುದರಿಂದ ಪ್ರಕರಣ ಮುಂದೂಡಲಾಗಿದೆ.

ಈ) ರಾಜ್ಯ ಅಧೀನ ಸಂಸ್ಥೆಗಳಿಂದ ಈ ಕೆಳಕಂಡಂತೆ ಖರ್ಚು ಮಾಡಲಾಗಿದೆ.

ಕೇಂದ್ರ ಸರ್ಕಾರದ ವಂತಿಗೆ	ರೂ. 60.50 ಲಕ್ಷ
ಕೆ.ಎಸ್.ಐ.ಐ.ಡಿ.ಸಿ.	ರೂ. 0.75 ಲಕ್ಷ
ಕೆ.ಎಸ್.ಎಫ್.ಸಿ.	ರೂ. 7.34 ಲಕ್ಷ
ಕೆ.ಪಿ.ಸಿ.	ರೂ. 7.34 ಲಕ್ಷ
ಒಟ್ಟು	**ರೂ. 75.93 ಲಕ್ಷ**

ಇದುವರೆಗೆ ಉಪಕರಣಗಳ ಸ್ಥಾಪನಾ ಕಾರ್ಯವು ಪೂರ್ಣಗೊಂಡಿಲ್ಲವಾದ್ದರಿಂದ ವಿದ್ಯುತ್ ಉತ್ಪಾದನೆ ಇರುವುದಿಲ್ಲ.

2062 (2610) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ವಿದ್ಯುತ್ ಕಂಪನಿಯಲ್ಲಿ ಇರುವ ಒಟ್ಟು ಇಂಜಿನಿಯರುಗಳ ಹುದ್ದೆಗಳೆಷ್ಟು ಹಾಗೂ ಖಾಲಿ ಇರುವ ಹುದ್ದೆಗಳು ಎಷ್ಟು;

ಆ) ಲೈನ್ ಮ್ಯಾನ್ ಹುದ್ದೆಗಳೆಷ್ಟು ಹಾಗೂ ಖಾಲಿ ಇರುವ ಹುದ್ದೆಗಳು ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೊಡಗು ಜಿಲ್ಲೆಯ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಮಂಜೂರಾಗಿರುವ, ಹಾಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಇಂಜಿನಿಯರ್ ಹುದ್ದೆಗಳ ವಿವರ ಈ ಕೆಳಕಂಡಂತಿದೆ.